'ಅದ್ಸರಿ... ಮನೇದೆ ಬಿರಿಯಾನಿ ತಂದ್ಕೊಡಾನ... ಬಾಟ್ಲು ಯಾವ್ದು...' ಸೀನನ್ನು ಮತ್ತೆ ಪ್ರಶ್ನಿಸಿದ ಮಾದ. 'ಹೆಸ್ರು ಗೊತ್ತಿಲ್ಲ, ಒಂಬೈನೂರು ರೂಪಾಯಿದು ಬಾಟ್ಲು... ವೈನ್ ಸ್ಟೋರಲ್ಲಿ ಒಂಬೈನೂರು ರೂಪಾಯಿದು ಕೊಡಿ ಅಂದ್ರೆ ಕೊಡ್ತರೆ... ಮಾಡದಾದ್ರೆ ಬೇಗ ಮಾಡು. ತಡ ಮಾಡ್ ಬ್ಯಾಡ... ಸಾಹೇಬ್ರು ಬ್ಯಾರೆ ಯಾರಿಗಾದ್ರೂ ಹೊಸುಬ್ರಿಗೆ ಮಾತು ಕೊಟ್ಟುಬುಟ್ಟಾರು...' ಸೀನ ಹೆದರಿಸುವವನಂತೆ ಹೇಳಿದಾಗ ಮಾದನ ಹೊಟ್ಟೆಯಲ್ಲಿ ಚಿಟ್ಟೆಗಳು ಹಾರಾಡಿದಂತಾಗಿ 'ಇಲ್ಲ ಕಣೋ... ನಾಳೇನೆ ಏರ್ಪಾಟು ಮಾಡ್ತೀನಿ...' ಅಂದ. 'ನಾನು ಹೇಳ್ದೆ ಅಂತ ಯಾರಿಗೂ ಗೊತ್ತಾಗಬಾರ್ದು... ತಿಳೀತಾ...' ಎಂದು ಹೇಳಿ ಸೀನ ತೂರಾಡುತ್ತಾ ಅತ್ತ ಹೊರಟ. ಸೀನ ಅತ್ತ ಹೋದ ಮೇಲೆ ಮಾದ ಬಿರಬಿರನೆ ಮನೆಯ ಕಡೆ ಹೆಜ್ಜೆ ಹಾಕಿದ. ಮನೆ ತಲುಪಿದಾಗ ನಿಂಗಿ ಬಾಗಿಲಲ್ಲೇ ನಿಂತು ಕಾತುರದಿಂದ ಇವನ ದಾರಿಯನ್ನೇ ಕಾಯುತ್ತಿದ್ದಳು. ಸೀನ ಹೇಳಿದ ಕೆಲಸ ಉಳಿಸಿಕೊಳ್ಳುವ ರಹಸ್ಯವನ್ನು ನಿಂಗಿಗೆ ತಿಳಿಸಿದಾಗ ಅವಳು ತಕ್ಷಣವೇ, 'ಇಲ್ಲೇ ಇರು, ಫಾತಿಮಕ್ಕನ ಮನೆಗೆ ಹೋಗಿ ಬತ್ತೀನಿ...' ಎಂದು ಹೇಳಿ ಆತುರಾತುರವಾಗಿ ಫಾತಿಮಳ ಮನೆಯ ಕಡೆ ಹೊರಟಳು.

ವಿದ್ಯುತ್ ದೀಪದ ಮಂಕು ಬೆಳಕಲ್ಲಿ ಗೋಡೆಗೊರಗಿ ಎರಡೂ ಕಾಲುಗಳನ್ನು ನೀಳವಾಗಿ ಚಾಚಿ ತಗಡಿನ ಮೊರವೊಂದನ್ನು ತೊಡೆಯ ಮೇಲಿಟ್ಟುಕೊಂಡು ಹಿಂದೆ ಮುಂದೆ ತೂಗುತ್ತಾ ಬೀಡಿ ಕಟ್ಟುತ್ತಿದ್ದ ಫಾತಿಮಾ ಅಪರೂಪಕ್ಕೆ ಮನೆಯ ಒಳಗೆ ಬಂದ ನಿಂಗಿಯನ್ನು ಕಂಡು ತನ್ನ ಕೆಲಸ ನಿಲ್ಲಿಸಿ, 'ಏನೇ ನಿಂಗಿ ಇಷ್ಟೊತ್ನಲ್ಲಿ ಬಂದೆ...' ಎಂದು ಆಶ್ಚರ್ಯದಿಂದ ಕೇಳಿದಳು. 'ಏನೂ ಇಲ್ಲ ಕಣಕ್ಕಾ... ನಿನ್ನಿಂದ ಒಂದು ಉಪಕಾರ ಆಗ್ಬೇಕಿತ್ತು...' ನಿಂಗಿ ಸಹಾಯ ಯಾಚಿಸುವ ದನಿಯಲ್ಲಿ ಕೇಳಿದಾಗ ಫಾತಿಮಾ ನಗುತ್ತಲೇ, 'ನನ್ನಿಂದ ಎಂತಾ ಉಪಕಾರ ನಿಂಗಿ... ಬೀಡಿ ಕಟ್ಟೋದೇನಾರ ಹೇಳಿಕೊಡಬೇಕಾಗಿತ್ತಾ...' ಎಂದು ತಮಾಷೆ ಮಾಡಿದಳು. 'ಅದಲ್ಲ ಕಣಕ್ಕಾ...' ಎಂದ ನಿಂಗಿ ತನ್ನ ಗಂಡನ ಕೆಲಸ ಉಳಿಸಿಕೊಳ್ಳಲು ಸಾಹೇಬರಿಗೆ ಕೊಡಬೇಕಾಗಿರುವ ಬಿರಿಯಾನಿಯ ವಿಷಯ ತಿಳಿಸಿದಳು. 'ಅಷ್ಟೇನಾ... ಮಾಡ್ಕೊಡ್ತೀನಿ ತಗೋ...' ಯಾವುದೇ ಬೇಸರವಿಲ್ಲದೆ ನುಡಿದ ಫಾತಿಮಕ್ಕಳ ಮಾತು ಕೇಳಿ ನಿಂಗಿಗೆ ಅತೀವ ಸಂತೋಷವಾಗಿ ಆಕೆಯ ಮುಖ ಹೂವಿನಂತೆ ಅರಳಿತು. 'ಏನೇನು ತಂದುಕೊಡಬೇಕು ಹೇಳಕ್ಕಾ...' ಉತ್ಸಾಹದ ದನಿಯಲ್ಲಿ ನಿಂಗಿ ಕೇಳಿದಳು. 'ನಮ್ಮನೇಲಿ ಇರೋದು ಸೊಸೈಟಿ ಅಕ್ಕಿ ದಪ್ಪುದು... ಅಂಗಡಿಯಿಂದ ಒಂದು ಪಾವು ಸಣ್ಣಕ್ಕಿ, ಕಾಲು ಕೇಜಿ ಮಾಂಸ ತಂದುಕೊಡು ಸಾಕು... ಉಳಿದದ್ದೆಲ್ಲಾ ನಮ್ಮನೇಲೆ ಐತೆ...' ಅಂದ ಫಾತಿಮಕ್ಕಳ ದೊಡ್ಡ ಮನಸ್ಸನ್ನು ಕಂಡು ನಿಂಗಿಯ ಕಣ್ಣುಗಳು ತುಂಬಿಬಂದವು. ನಾಳಿಕ್ಕೆ ಬತ್ತೀನಿ ಕಣಕ್ಕಾ ಎಂದು ಹೇಳಿ ಮನೆಗೆ ಬಂದ ನಿಂಗಿಗೆ ಎಷ್ಟಾದರೂ ಖರ್ಚಾಗಲಿ ತನ್ನ ಗಂಡನ ಕೆಲಸ ಉಳಿದರೆ ಸಾಕು ಎನಿಸಿತ್ತು.

ಬಿರಿಯಾನಿಯ ವ್ಯವಸ್ಥೆ ಆದ ಮೇಲೆ ಅದನ್ನು ತುಂಬಲು ಬೇಕಾದ ಸ್ಟೀಲು ಡಬ್ಬಿಗಾಗಿ ಏನು ಮಾಡುವುದೆಂದು ತಿಳಿಯಲಿಲ್ಲ. ಮನೆಯಲ್ಲಿ ಮಕ್ಕಳಿಗೆ ಊಟ ತುಂಬಿಕೊಡುತ್ತಿದ್ದ ಸಣ್ಣ ಡಬ್ಬಿಗಳನ್ನು ಬಿಟ್ಟು ಅಂತಹ ಡಬ್ಬಿ ಯಾವುದೂ ಇರಲಿಲ್ಲ. ಒಂದು ಹೊಸ ಸ್ಟೀಲಿನ ಡಬ್ಬಿ ಮತ್ತು ಅದನ್ನು ಇಟ್ಟುಕೊಂಡು ಹೋಗಲು ಹೊಸ ಬ್ಯಾಗೊಂದನ್ನು ಅಂಗಡಿಯಿಂದ ತರುವುದೆಂದು ನಿಂಗಿ ನಿರ್ಧರಿಸಿದಳು. ಈ ಎಲ್ಲಾ ಖರ್ಚಿಗಾಗಿ ಮಕ್ಕಳ ಫೀಸು ಕಟ್ಟಲೆಂದು ತನ್ನ ರವಿಕೆಯಲ್ಲಿಟ್ಟುಕೊಂಡಿದ್ದ ಸಣ್ಣ ಪರ್ಸಿನಿಂದ ಐದುನೂರು ರೂಪಾಯಿಯ ಮೂರು ಗಾಂಧಿ ನೋಟುಗಳನ್ನು ತೆಗೆದು ಮಾದನ ಕೈಯ್ಯಲ್ಲಿ ಕೊಟ್ಟಾಗ, ತನ್ನ ಹೆಂಡತಿಯೂ ಬಹಳ